# ದೇವಪ್ಪನ ಹೊಟೇಲ್ ಉದ್ಯಮ ಸೊರಗಿದ್ದೇಕೆ?

ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್‌.ಎಸ್‌. ಮೋನಪ್ಪ

'ಯಾತ್ರಿ ಕಂಡಕ್ಟರ್, ಬೈಕು ಅಷ್ಟ್ಯಾಕ ಸ್ಲೋ ಹೊಡೀತೀರಿ. ಸ್ಪೀಡ್ ಹೊಡೆದ್ರ ಪೆಟ್ರೋಲ್ ಜಾಸ್ತಿ ಹೋಗ್ತದಂತ ಅಂತೀರೇನು?' ಹಿರಿಯರೊಬ್ಬರ ಪ್ರಶ್ನೆಗೆ ಮತ್ತೊಬ್ಬ ಹಿರಿಯರು ಕಂಡಕ್ಟರನಿಗೆ ತುಸು ಬೇಸರವಾಗುವಂತೆ ಹೇಳುವರು. 'ಬೈಕ್ ಹೊಡೀತಾ ಸಾಲದ ಪುಸ್ತಕ ಬರೀತಾ ಹೋಗಬೇಕಲ್ಲ.' ತನ್ನನ್ನು ಅವಮಾನಿಸುವ ಇವರು ತನ್ನಿಂದ ಸಾಲ ತೆಗೆದುಕೊಂಡವರೆ! 'ಹೌದ್ರಿಪಾ, ನಿಮ್ಮಂಗ ಜಮೀನ್ದಾರರು ಅಲ್ಲ ನಾವು. ಅದಕ್ಕ ಪೆಟ್ರೋಲ್ ಉಳಿಸ್ತೇವಿ.' ಏನೇ ಆದರೂ ಈ ಊರಿನ ಅಣಕು ಅಪಹಾಸ್ಯಗಳನ್ನು ಆತ ತಡೆದುಕೊಳ್ಳಬೇಕಿತ್ತು.

'ಹೂಂ. ಜಮೀನ್ದಾರರು ಅಲ್ಲದೆ ಇರಬಹುದು. ಆದರ ಜಮೀನ್ದಾರರಿಗೆ ಸಾಲ ಕೊಡ್ತೀಯಲ್ಲ, ಮೆಚ್ಚಬೇಕು ಅಲ್ಲ?' ಕಂಡಕ್ಟರ್ ಬೈಕ್ ತಂದಿದ್ದಾನೆಂದರೆ ಖಾತೆಕಿರ್ದಿಗೆ ಬಂದಿದ್ದಾನೆಂದೇ ಅರ್ಥ. ಅವನಿಂದ ಸಾಲ ತೆಗೆದುಕೊಳ್ಳದ ಊರುಗಳೆ ಇಲ್ಲ. ಮಲ್ಲೂರಿನಲ್ಲಿ ಏನಿಲ್ಲವೆಂದರೂ ಇಪ್ಪತ್ತು ಮಂದಿಗೆ ಸಾಲ ಕೊಟ್ಟಿದ್ದಾನೆ. 'ಸುಭಾಸನ ಸಾಲ' ಎಂದೇ ಅವನ ಸಾಲ ಪ್ರಸಿದ್ಧವಾಗಿತ್ತು. 'ಸುಭಾಸನ ಸಾಲ', 'ಸೊಸೈಟಿ ಸಾಲ', 'ಫೈನಾನ್ಸ್ ಸಾಲ', 'ಬ್ಯಾಂಕ್ ಸಾಲ', 'ಸೋಮಣ್ಣನ ಒತ್ತೆ ಸಾಲ', 'ದುಂಡಪ್ಪನ ಕೈಗಡ' ಹೀಗೆ ಹತ್ತಾರು ಸಾಲುಗಳಿಂದ ಆ ಊರು ಸಂಪದ್ಭರಿತವಾಗಿತ್ತು! ಸೋಮಣ್ಣನಲ್ಲಿ ಬಂಗಾರದ ದಾಗೀನು, ಬೆಳ್ಳಿಯ ದೇವರ ಮೂರ್ತಿ, ಹಂಡೆ, ತಪ್ಪೇಲಿ, ಕೊಳಗ ಹೀಗೆ ಏನಾದರೊಂದು ಬೆಲೆ ಬಾಳುವ ಸಾಮಾನನ್ನು ಒತ್ತೆ ಇಡದ ಹೊರತು ಸಾಲ ಸಿಗುತ್ತಿರಲಿಲ್ಲ. ದುಂಡಪ್ಪ ಅಯ್ಯೋ ಪಾಪ ಎಂದು ತನ್ನ ಕೈಲಾದಷ್ಟು ಕೊಡುತ್ತಿದ್ದ. ಸುಭಾಸನ ಹತ್ತಿರ ಜನ ಮುಗಿಬಿದ್ದು ಹೋಗುವುದಕ್ಕೆ ಕಾರಣವೂ ಇತ್ತು. ಗುರುತು ಪರಿಚಯವಿದ್ದರೆ ಸಾಕು, ಆತ ಯಾವುದೆ ಒತ್ತೆ, ಜಾಮೀನು, ಶ್ಯೂರಿಟಿ, ಸುಡುಗಾಡು ಅಂತ ಕೇಳುತ್ತಿರಲಿಲ್ಲ. ಅವನದೇನಿದ್ದರೂ ಒಂದು ಪಾಕೆಟ್ ಬುಕ್. ಒಂದೊಂದು ಊರಿಗೆ ಒಂದೊಂದು ಪಾಕೆಟ್ ಬುಕ್.

'ಅಲ್ಲೋ ಸುಭಾಸಣ್ಣ, ನೀ ಕಂಡಕ್ಟರ್ ಆಗಿದ್ದಕ್ಕೂ ಸಾರ್ಥಕ ಆತು ನೋಡು. ಟಿಕೆಟ್ ಕೊಟ್ಟು, ವೇಬಿಲ್ ಹರಿಯೋ ರೂಢಿ ಇದ್ದಿದ್ದಕ್ಕ ಸಾಲಪತ್ರ ಸೈತ ಸಲೀಸಾಗಿ ಬರೆಯೋದನ್ನ ಕಲಕೊಂಡೆ.' ಬಸ್‌ನಲ್ಲಿ ಎಷ್ಟೇ ಗದ್ದಲವಿದ್ದರೂ, ಮಕ್ಕಳುಮರಿ ಅಳುತ್ತಿದ್ದರೂ, ಅವರುಇವರು ಹೊಡೆದಾಡುತ್ತಿದ್ದರೂ ತನಗದು ಸಂಬಂಧಿಸಿದ್ದಲ್ಲವೆಂಬಂತೆ ಬಸ್ಸಿನ ಸೀಟಿಗೋ, ಕಂಬಕ್ಕೋ ಆತುಕೊಂಡು ವೇಬಿಲ್ ಬರೆಯುವುದು ಆಶ್ಚರ್ಯದ ಸಂಗತಿಯಾಗಿತ್ತು. ಅವನ ಅಕ್ಷರಗಳು ಸಹ ಎಷ್ಟು ಚೆಂದ. ಕೆಲವೊಮ್ಮೆ ಬಸ್ಸಿನಲ್ಲಿ ಕುಳಿತೆ ಪ್ರೇಮಪತ್ರ ಬರೆದು ಟಿಕೆಟ್ ಕೊಡುವಾಗಲೋ, ಬಸ್ಸಿನಿಂದ ಇಳಿಯುವಾಗಲೋ ಕೊಡುತ್ತಿದ್ದ ಎನ್ನುವ ಸುದ್ದಿಯಿತ್ತು. ಮಲ್ಲೂರಿನಲ್ಲಿ ಇಬ್ಬರಿಗಾದರೂ ಅಂತಹ ಪತ್ರಗಳು ತಲುಪುತ್ತಿದ್ದವು. ಒಂದು ಸಲ ದುರ್ಗ ಶಂಕೆ ವ್ಯಕ್ತಪಡಿಸಿದ್ದ. ನೀರಿಗೆ ಬಂದಾಗ ಅದನ್ನು ಮತ್ತೊಮ್ಮೆ ಓದಿ, ಮುದ್ದೆ ಮಾಡಿ ಬಾವಿಗೆ ಚೆಲ್ಲುವ ಮುನ್ನ ಅದಕ್ಕೆ ತಮ್ಮ ತುಟಿ ಸೋಕಿಸುತ್ತಿದ್ದರಂತೆ! ನೀರು ಸೋಸಿದರೆ ಆ ಅಕ್ಷರಗಳು ದೊರಕಬಹುದೆ! ಚಲಿಸುತ್ತಿರುವ ಬಸ್ಸಿನಲ್ಲಿ ಅಕ್ಷರ ಆ ಕಡೆ, ಈ ಕಡೆ ಹೋಗದಂತೆ ನೀಟಾಗಿ ಬರೆಯುವುದಕ್ಕೂ ಚಾಣಾಕ್ಷತೆ ಬೇಕು. ಕಾನೂನುಬಾಹಿರ ಸಾಲ ಮತ್ತು ಭೂಹಿಡುವಳಿಯಲ್ಲಿಯೂ ಆ ಜಾಣತನವನ್ನು ಉಪಯೋಗಿಸಿಕೊಂಡ. ದುರ್ಗಪ್ಪನಿಗೆ ಐದು ಸಾವಿರ ರೂಪಾಯಿ ಸಾಲ ಕೊಟ್ಟು ನಾಲ್ಕು ವರ್ಷ ಆಗಿತ್ತು. ಹೊಲ ಬರೆದುಕೊಡು ಎಂದಾಗ 'ತಗೋ ಹೊಲ' ಎಂದು ಕುಡುಗೋಲು ಬೀಸಿದ್ದ ದುರ್ಗ. ದುರ್ಗನಿಗೆ ಈಗ ಏನೂ ನೆನಪಿಲ್ಲ. ತಲೆಗೆ ತೀವ್ರ ಪೆಟ್ಟುಬಿದ್ದು ಚೇತರಿಸಿಕೊಂಡಿದ್ದಾನೇನೋ ಖರೆ. ಆದರೆ ಏನು ಹೇಳುತ್ತಿದ್ದಾನೆಂದೆ ತಿಳಿಯುವುದಿಲ್ಲ. ಮೇಲಾಗಿ ಅವನ ಮಾನಸಿಕ ಸ್ಥಿತಿಯೂ ಸರಿಯಿಲ್ಲವಂತೆ. ಆಕಸ್ಮಿಕ ಕಲಹದಲ್ಲಿ ಕಂಡಕ್ಟರ್ ಸತ್ತಿದ್ದೆಂದು ಕೋರ್ಟಿನಲ್ಲಿ ಸಾಬೀತಾಗಿ ಎಲ್ಲರೂ ಖುಲಾಸೆಯಾದರು. ಕಂಡಕ್ಟರನ ಹೆಂಡತಿ ಮೇಲ್ಮನವಿ ಹೋಗಬೇಕೆಂದಿದ್ದಳು.

ದುಂಡಪ್ಪಕಾಕಾ ಹೆಚ್ಚಿನ ಪರಿಹಾರದ ಲಾಭ ಹೇಳಿದಾಗ ಆಕೆ ಸುಮ್ಮನಾದಳು. ತಿಂಗಳುಗಳ ಕಾಲ ಆ ಕೊಲೆಯ ಬಗ್ಗೆಯೆ ಊರು ಮಾತಾಡುತ್ತಿತ್ತು. 'ಎಂದೂ ಸಾಲ ಮಾಡಬಾರದು' ಎನ್ನುವ ಮಾತು ಹೇಳುತ್ತಲೇ ಅವರಿವರಿಂದ ಸಾಲ ತರಬೇಕಾದಾಗಲೆಲ್ಲ ಕಂಡಕ್ಟರನ ನೆನಪಾಗುವುದು. ದೇವಪ್ಪ ತನ್ನ ಹೊಟೇಲನ್ನು ಬಂದ್ ಮಾಡಿಕೊಂಡು ಹೋಗಿ ವರ್ಷವಾಯಿತು. ಹೊಂಗಲದ ಹೊಟೇಲಿನಲ್ಲಿ ಕೆಲಸಕಿದ್ದಾನಂತೆ. ತಾನು ಸತ್ತರೂ ಸರಿ, ಅನಸೂಯೆಯ ಮುಖ ನೋಡಲಾರೆ ಎಂದಿದ್ದಾನೆ. ಆಕೆಯನ್ನು ಕೊಂದು ತಾನೇಕೆ ಜೈಲಿಗೆ ಹೋಗಲಿ? ಅವಳ ಪಾಪ ಅವಳಿಗೆ, ಅವಳನ್ನು ಕ್ಷಮಿಸಿಬಿಟ್ಟೆ ಎಂದನಂತೆ. ಸುದ್ದಿಗಳು ಎಷ್ಟೋ ದಿನದ ಮೇಲೆ ತಿಳಿದವು. ಏನು ನಡೆಯುತ್ತಿದೆಯೆಂದು ಈಗ ಹೆಚ್ಚಾಗಿ ತಿಳಿಯುವುದೇ ಇಲ್ಲ. ಹೊಟೇಲು ಇದ್ದಿದ್ದರೆ ಎಷ್ಟೆಲ್ಲ ಸುದ್ದಿ ಗೊತ್ತಾಗುತ್ತಿದ್ದವು! ಹೊಟೇಲು, ದೇವಪ್ಪ, ಅನಸವ್ವ, ದುರ್ಗಪ್ಪ, ಕಂಡಕ್ಟರ್ ಮುಂತಾದವರು ಇಲ್ಲದೆ ಊರು ಎಷ್ಟೊಂದು ಬಡವಾಯಿತು! ಹಲವರು ಮರುಗಿಯೇ ಮರುಗುವರು.

ಬಸ್ಸು ಪ್ರತಿ ಸಲ ಮಲ್ಲೂರಿಗೆ ಬಂದಾಗ ಹೊಟೇಲಿನ ಮುಂದೆ ನಿಲ್ಲುವುದು ರೂಢಿ. ಅಲ್ಪಾಹಾರ, ಉಪಾಹಾರ, ದಣಿವಾರಿಕೆಗೆಂದು ಈಗಲೂ ಬಸ್ಸುಗಳು ಅಲ್ಲಿಗೆ ಬಂದು ನಿಲ್ಲುತ್ತವೆ. ನಿಂತ ಮೇಲೆ ಬಸ್ಸಿನ ಚಾಲಕ, ನಿರ್ವಾಹಕ ಮತ್ತು ಒಳಗೆ ಕುಳಿತಿರುವ ಜನರಿಗೆಲ್ಲ ಅನಿಸುವುದು. ಓಹ್! ಈ ಹೊಟೇಲ್ ಬಂದ್ ಆಗಿದೆ! ಮರೆತೆಹೋಗಿತ್ತು. ದೇವಪ್ಪನ ಚಾದಂಗಡಿಯಲ್ಲಿ ಚಹಾ ಕುಡಿದರಾಯಿತೆಂದು ಹಿಂದಿನ ಎಲ್ಲ ಊರುಗಳಲ್ಲಿ ಏನೂ ತಿನ್ನದೆ, ಚಹಾ ಕೂಡ ಕುಡಿಯದೆ ಹುಲಿಯಂತೆ ಹೊಟ್ಟೆ ಹಸಿದುಕೊಂಡು ಇಲ್ಲಿಗೆ ಬಂದರೆ ಈ ಪಾಡು! ಅವರಿಗೆಲ್ಲ ತೀವ್ರ ನಿರಾಶೆ ಕಾಡುವುದು. ಈ ಸೀಮೆಯಲ್ಲಿ ಇದೊಂದು ಒಳ್ಳೆಯ ಹೊಟೇಲಿತ್ತು. ಅದೂ ಮುಚ್ಚಿಹೋಯಿತೆ? ಕಂಡಕ್ಟರ್ ಸತ್ತಿದ್ದು ಇಲ್ಲೇ ಅಲ್ಲವೆ? ದಿನಗಳು ಕಳೆದಂತೆ ಆ ಘಟನೆಯನ್ನು ಬಹುತೇಕರು ಮರೆತಿದ್ದಾರೆ. ಕೆಲವರಿಗೆ ಮಾತ್ರ ನೆನಪಿದೆ. ಚಾದಂಗಡಿಯ ಅಂಗಳದಲ್ಲಿ ಬಟ್ಟಲ ಹೂವು, ಮಲ್ಲಿಗೆ ಮೊಗ್ಗು, ದಾಸವಾಳ ಕಂಟಿ, ಸಂಪಿಗೆ ಮರ ಎಲ್ಲ ಇದ್ದವು. ಈಗ ಬಾಗಿಲಿನ ಆಚೆಈಚೆ ಪೀಕಜಾಲಿಯ ಮುಳ್ಳಿನ ಗಿಡಗಳು ಅಗಲಕ್ಕೂ ಉದ್ದಕ್ಕೂ ಬೆಳೆದು ಹೂಗಿಡಗಳನ್ನು ಮುಚ್ಚಿಹಾಕಿವೆ.

ಚಾದಂಗಡಿಯ ಮುಂದೆ ಅದರ ಕಳಸವೆಂಬಂತೆ ನಿಂತಿದ್ದ ತಿಳಿಹಳದಿ ಸಂಪಿಗೆಯ ಗಿಡ ಇನ್ನೂ ಎತ್ತರವಾಗಿದೆ. ದೇವಪ್ಪನನ್ನು ಮರೆಯಬಾರದೆಂದೇ ಅದರ ಹಸಿರು ಮಾಸಿಲ್ಲವೆಂದು ಕಾಣುತ್ತದೆ. ಮರದ ತುಂಬೆಲ್ಲ ಹೂಗಳು. ಮರುಳುಗೊಳಿಸುವ ಸಂಪಿಗೆಯ ಸುವಾಸನೆ ಹುಡುಕಿಕೊಂಡು ಹಾವು ಬರುತ್ತವೆಯೆಂದು ದೇವಪ್ಪನಿಗೆ ಯಾರೋ ಹೇಳಿದರು. ಆತ ಒಂದು ದಿನ ಬರಬರಾ ಬಂದು ಅದನ್ನು ಕಡಿಸಲು ಸಜ್ಜಾಗಿದ್ದ. ಇದೇನಿದು ಇವನಿಗೆ ದೆವ್ವ ಹಿಡಿದಿದೆಯೇನೆಂದು ಅನಸೂಯೆ ಅಡ್ಡ ಬಂದು ನಿಂತಳು.

'ಮಂದಿ ಹೇಳೋದನ್ನ ಆಗಿಂದಾಗ ನಂಬತೀರಿ ನೋಡ್ರಿ. ಅಲ್ರಿ, ಈ ಗಿಡಾ ಇದ್ದಿದ್ದಕ್ಕ ನಿಮ್ಮ ಹೊಟೇಲು ಇಷ್ಟು ಚುಲೋ ಆಗೇತಿ. ಅದ್ಯಾಕ ನಿಮ್ಮ ತಲಿಗೆ ಹೊಳೆಯೋದಿಲ್ಲ.' ಆದರೂ ದೇವಣ್ಣನಿಗೆ ಅನುಮಾನ ಇದ್ದೇ ಇರುವುದು. ಮನೆಯೊಳಗೆ ಏನಾದರೂ ಕೇಡು ಹೊಕ್ಕರೆ? ಪ್ರಲೋಭನೆ ಎನ್ನುವುದು ಎಲ್ಲಿಂದ, ಯಾವ ಮೂಲೆಯಿಂದ ನುಸುಳುವುದೋ, ಯಾರಿಗೆ ಗೊತ್ತು? ಮೋಹದ ಹುತ್ತಗಳಲ್ಲಿ ಎಷ್ಟೊಂದು ಹಾವು ಅಡಗಿ ಕುಳಿತಿವೆಯೊ ಏನೋ! ಅವನು ಏನೇ ತಿಪ್ಪರಲಾಗ ಹಾಕಿದರೂ ಸಂಪಿಗೆ ಕಡಿಯಲು ಅನಸೂಯೆ ಬಿಡಲಿಲ್ಲ.

'ರೀ, ಅದರ ವಾಸನೆಯಾದ್ರೂ ನಿಮ್ಮ ಮೂಗಿಗೆ